


ಸುಮಾರು ಇನ್ನೂರು ಮುನ್ನೂರು ಮೀಟರಗಳಿಗೆ ಒಂದರಂತೆ ಮನೆಗಳು, ಅವರದೇ ಕೊಟ್ಟಿಗೆ, ಗೊಬ್ಬರ ಕುಳಿ ಒತ್ತಾರೆಯಾಗಿ ಕಾಣಲು ಸಿಗುತ್ತವೆ. ಮನೆಗಳ ಹಿಂಭಾಗದಲ್ಲಿ ವಿಸ್ತಾರವಾದ ಬಯಲು ಅಂದರೆ ಗದ್ದೆಗಳ ಸಾಲು.

ಎಡಬದಿಗೆ ರಮಣೀಯ ಎನ್ನುವಂತಹ ಪರಿಸರದ ಮಧ್ಯೆ ಉದ್ದಕ್ಕೆ ಹಬ್ಬಿದ ಚೀರೆಕಲ್ಲು ಗುಡ್ಡ. ನಡುನಡುವೆ ಅಲ್ಲಲ್ಲಿ ಮೂವತ್ತು ನಲವತ್ತು ಆಳದ ಚೀರೆಕಲ್ಲು ಗಣಿಗಳು. ಹಿಂದೆಲ್ಲಾ ಈ ಗಣಿಯಿದ್ದಲ್ಲಿ ಅದರ ಒಡೆತನದವರು ಶೇಂಗಾ ಬೆಳೆಯುತ್ತಿದ್ದರಂತೆ. ಮೊಗ್ಗೆ ಓಳಿ ಮಾಡಿದರೆ ಗೊಂಚಲು ಗೊಂಚಲು ಮೊಗ್ಗೆ ಬೆಳೆಯುತ್ತಿದ್ದವಂತೆ. ಆಗಾಗ ಕೆಲವರು ಮಲ್ಲಿಗೆ ಹೂ ಬೆಳೆದು ಹಣ ಮಾಡಿದ್ದು ಇದೆಯಂತೆ. ಚೀರೆಕಲ್ಲು ಗುಡ್ಡ ಮತ್ತು ಮನೆಗಳ ಸಾಲಿನ ನಡುವೆ ಉದ್ದಕ್ಕೂ ಇರುವ ರಸ್ತೆ ಅಂಗಡಿಬೈಲಿಗೆ ಹೋಗಿ ಮುಟ್ಟುತ್ತದೆ. ಮೊದಲು ಮಣ್ಣಿನ ರಸ್ತೆಯಾಗಿದ್ದದ್ದು ಹಮ್ಮಣ್ಣ ನಾಯಕರ ಮಗ